# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 549 |
| ಸದಸ್ಯರ ಹೆಸರು | : ಶ್ರೀ ಲಹರ್ ಸಿಂಗ್ ಸಿರೋಯಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 13-12-2018 |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕನ್ನಡದ ಪ್ರಖ್ಯಾತ ನಟ ಡಾ: ವಿಷ್ಣುವರ್ಧನ್ ಅವರ ನೆನಪಿನಲ್ಲಿ ಸ್ಮಾರಕ ನಿರ್ಮಾಣ ಮಾಡುವ ಯೋಜನೆ ಬಗ್ಗೆ ಸರ್ಕಾರದ ನಿಲುವು ಏನು ; | ದಿವಂಗತ ಡಾ:ರಾಜ್‌ಕುಮಾರ್ ಸ್ಮಾರಕ ನಿರ್ಮಾಣದ ಮಾದರಿಯಲ್ಲಿಯೇ ದಿವಂಗತ ಡಾ:ವಿಷ್ಣುವರ್ಧನ್ ಸ್ಮಾರಕ ನಿರ್ಮಾಣ ಕಾಮಗಾರಿಗಾಗಿ ಸರ್ಕಾರದ ಆದೇಶ ಸಂ: ಕಸಂವಾಪ್ರ 06 ಪಿಎಫ್ 2010, ದಿ:26.04.2010ರಲ್ಲಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಡಾ.ವಿಷ್ಣುವರ್ಧನ್ ಸ್ಮಾರಕ ಪ್ರತಿಷ್ಠಾನವನ್ನು ರಚಿಸಲಾಗಿದ್ದು, ತದನಂತರ ಸರ್ಕಾರದ ಆದೇಶ ಸಂ: ಕಸಂವಾಪ್ರ 06 ಪಿಎಫ್ 2010, ದಿ:27.08.2010ರಲ್ಲಿ ಮೆ.ಅಭಿಮಾನ್ ಸ್ಟುಡಿಯೋಗೆ ಸೇರಿದ 2 ಎಕರೆ ಜಮೀನನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಮುಖಾಂತರ ನೀಡಿ ಭೂಮಿಯನ್ನು ಪ್ರತಿಷ್ಠಾನದ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳುವ ಷರತ್ತಿಗೊಳಪಡಿಸಿ ಸ್ಮಾರಕ ನಿರ್ಮಾಣಕ್ಕಾಗಿ ರೂ.2.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ತದನಂತರದಲ್ಲಿ ಇದೇ ಕ್ರಮಾಂಕದ ದಿ: 15.12.2010ರ ಆದೇಶದಲ್ಲಿ ಸ್ಮಾರಕ ನಿರ್ಮಾಣಕ್ಕಾಗಿ ರೂ.8.00 ಕೋಟಿಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ರೂ.3.00ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಅನುದಾನವು ಪ್ರಸ್ತುತ ವಿಷ್ಣುವರ್ಧನ್ ಸ್ಮಾರಕ ಪ್ರತಿಷ್ಠಾನದ ಸುಪರ್ದಿಯಲ್ಲಿದೆ.<br>ಡಾ:ದಿ:ಟಿ.ಎನ್.ಬಾಲಕೃಷ್ಣರವರ ಕುಟುಂಬಸ್ಥರು ಮೆ:ಅಭಿಮಾನ್ ಸ್ಟುಡಿಯೋಗೆ ಸೇರಿದ ಜಾಗಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಹೂಡಿದ್ದ ದಾವೆ ಇತ್ಯರ್ಥವಾಗಿರದ ಹಿನ್ನೆಲೆಯಲ್ಲಿ ಕೆಂಗೇರಿ ಹೋಬಳಿ, ಮೈಲಸಂದ್ರ ಗ್ರಾಮ ಸರ್ವೆ ನಂ. 68ರಲ್ಲಿ (ಹಳೆ ಸರ್ವೆ ನಂ.26) 2.00 ಎಕರೆ ಜಮೀನ್‌ನ್ನು ಡಾ:ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕಾಗಿ ಆದೇಶ ಸಂಖ್ಯೆ ಎಲ್ ಎನ್ ಎನ್ ಡಿ (ಎಸ್)ಸಿ.ಆರ್1231/2012-13 ದಿ:5-3-2014ರಲ್ಲಿ ಮಂಜೂರು ಮಾಡಲಾಯಿತು. ಸದರಿ ಜಮೀನು ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತದೆ ಎಂದು ಕೆಲವರು ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ರಿಟ್ ಪಿಟಿಷನ್ ಸಂಖ್ಯೆ 60747-60748/2014 ಮತ್ತು 60749/2014 ರಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಆದೇಶ ನೀಡಲಾಗಿದೆ.<br>ಈ ಹಿನ್ನೆಯಲ್ಲಿ ಸ್ಮಾರಕ ನಿರ್ಮಾಣಕ್ಕಾಗಿ ಮತ್ತೊಮ್ಮೆ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಾಲಾಳು ಗ್ರಾಮದ ಸರ್ವೆ ನಂ.8 ರಲ್ಲಿ 5.00 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ. ತದನಂತರದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಜಮೀನು ಹಸ್ತಾಂತರಿಸಲಾಗಿದ್ದು, ದಿ:6-12-2016ರಂದು ಸದರಿ ಜಮೀನಿನಲ್ಲಿ ದಿ:ಡಾ:ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕಾಗಿ ಭೂಮಿ ಪೂಜೆ ನೆರವೇರಿಸಿದ್ದು ಈಗಾಗಲೇ 2 ಕೊಳವೆ |

| | | |
|---|---|---|
| | | ಬಾವಿಗಳನ್ನು ತೆಗೆಸಲಾಗಿದೆ ಹಾಗೂ ಪ್ರಸ್ತಾವಿತ ಜಮೀನಿನ ಸುತ್ತ ಕಾಂಪೌಂಡ್ ನಿರ್ಮಾಣ ಮಾಡಲು ತಳಪಾಯ ತೆಗೆಯಲಾಗಿದೆ ದಿ:ಡಾ:ವಿಷ್ಣುವರ್ಧನ್ ಪ್ರತಿಷ್ಠಾನದ ತಾತ್ಕಾಲಿಕ ಕಚೇರಿ ಹಾಗೂ ವಾಚ್ ಮನ್ ಶೆಡ್ ಗಳನ್ನು ನಿರ್ಮಿಸಲಾಗಿದೆ.<br>ಈ ಹಂತದಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದ ಸ್ಥಳೀಯರು ಮೈಸೂರಿನ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ ಅಪೀಲು ದಾವೆ ಸಂಖ್ಯೆ ಓ.ಎಸ್ 809/2017ರ ಮೇರೆಗೆ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಪಡೆದುಕೊಂಡಿರುತ್ತಾರೆ. ಸದರಿ ಪ್ರತಿಬಂಧಕಾಜ್ಞೆ ಆದೇಶ ತೆರವುಗೊಳಿಸಲು ಎಂಎ32/2017ರ ಮೇರೆಗೆ 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಜೆಎಂಎಫ್ ಸಿ ನ್ಯಾಯಾಲಯ ಮೈಸೂರು ಇಲ್ಲಿ ಮೇಲ್ಮನವಿ ಸಲ್ಲಿಸಿದಾಗ, ಮೇಲ್ಮನವಿ ವಜಾಗೊಂಡು ಕೆಳ ನ್ಯಾಯಾಲಯದ ಆದೇಶ ಎತ್ತಿಹಿಡಿಯಲಾಗಿದೆ.<br>ಆದ್ದರಿಂದ ಸದರಿ ಪ್ರತಿಬಂಧಕಾಜ್ಞೆಯನ್ನು ತೆರವುಗೊಳಿಸಲು ಮಾನ್ಯ ಉಚ್ಛನ್ಯಾಯಾಲಯದಲ್ಲಿ ಸರ್ಕಾರವು ರಿಟ್ ಪಿಟಿಷನ್ ಸಂಖ್ಯೆ:ಡಬ್ಲ್ಯೂಪಿ 20286/2017ರಲ್ಲಿ ಅರ್ಜಿ ದಾಖಲಿಸಿದ್ದು ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಘನ ಉಚ್ಛ ನ್ಯಾಯಾಲಯ ಆದೇಶಿಸಿದೆ.<br>ಪ್ರತಿಬಂಧಕಾಜ್ಞೆ ತೆರವುಗೊಳಿಸುವ ಸಂಬಂಧದ ಪ್ರಕರಣ ಈಗಾಗಲೇ ಎರಡು ಬಾರಿ ನ್ಯಾಯಲಯದ ಮುಂದೆ ಬಂದಿದ್ದು, ಎದುರುದಾರರ ವಕೀಲರು ಹಾಜರಾಗದ ಕಾರಣ ಇದುವರೆವಿಗೂ ವಿಚಾರಣೆಗೆ ಬಂದಿರುವುದಿಲ್ಲ. ಪ್ರಕರಣವನ್ನು ಅಡ್ವಾನ್ಸ್ ಮಾಡಿಸಲು ಅಡ್ವೋಕೇಟ್ ಜನರಲ್ ಅವರಲ್ಲಿ ಚರ್ಚಿಸಿದ್ದು, ಪ್ರತಿಬಂಧಕಾಜ್ಞೆ ತೆರವುಗೊಳಿಸುವ ಸಂಬಂಧ ಕ್ರಮ ಕೈಗೊಳ್ಳಲಾಗಿದೆ. |
| ಆ) | ಸ್ಮಾರಕಕ್ಕಾಗಿ ಸರ್ಕಾರ ಸ್ಥಳ ನೀಡಿದೆಯೇ ; ಸ್ಮಾರಕ ನಿರ್ಮಾಣಕ್ಕಾಗಿ ಸರ್ಕಾರ ಅನುದಾನ ಬಿಡುಗಡೆ ಮಾಡಿದೆಯೇ ; | ಡಾ:ವಿಷ್ಣುವರ್ಧನ್ ಸ್ಮಾರಕಕ್ಕೆ ಮೈಸೂರಿನಲ್ಲಿ ಗುರುತಿಸಿರುವ ಜಾಗದಲ್ಲಿ ಡಾ:ವಿಷ್ಣುವರ್ಧನ್ ಪ್ರತಿಷ್ಠಾನದ ತಾತ್ಕಾಲಿಕ ಕಛೇರಿ ನಿರ್ಮಿಸಲಾಗಿದೆ. ಆವರಣ ಗೋಡೆ ನಿರ್ಮಿಸಲು ತಳಪಾಯ ತೆಗೆಯಲಾಗಿದೆ. ಸ್ಮಾರಕ ನಿರ್ಮಾಣಕ್ಕಾಗಿ ಒಟ್ಟಾರೆ ಈವರೆಗೆ 5.00 ಕೋಟಿ ಹಣ ಬಿಡುಗಡೆ ಮಾಡಲಾಗಿದೆ. |
| ಇ) | ಡಾ: ವಿಷ್ಣುವರ್ಧನ್ ಅವರು ನಿಧನರಾಗಿ 08 ವರ್ಷಗಳೇ ಕಳೆದರೂ ಸ್ಮಾರಕದ ನಿರ್ಮಾಣ ಮಾಡದಿರಲು ಕಾರಣವೇನು ; ಸರ್ಕಾರ ಯಾವ ಕಾಲಮಿತಿಯಲ್ಲಿ ಸ್ಮಾರಕ ನಿರ್ಮಾಣ ಮಾಡಲಿದೆ? | ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ಕೂಡಲೇ ಕಾಮಗಾರಿ ಚುರುಕುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |

**ಕಸಂವಾ 181 ಪಿಐಪಿ 2018**

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ